# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| | |
|---|---|
| | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,<br>ಬಿ.ಟಿ.ಎಂ.ಲೇಔಟ್ ಉಪ ವಿಭಾಗ,<br>16ನೇ ಮುಖ್ಯರಸ್ತೆ, ಬಿ.ಟಿ.ಎಂ.1ನೇ ಹಂತ,<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,<br>ಬೆಂಗಳೂರು-29. ದಿನಾಂಕ: 15/7/2021 |

## ವಾರ್ಡ್ ಸಮಿತಿ ಸಭೆಯ ಸೂಚನಾ ಪತ್ರ

ವಿಷಯ:- ವಾರ್ಡ್ ಸಮಿತಿ ಸಭೆಯನ್ನು ನಡೆಸುವ ಬಗ್ಗೆ

ಉಲ್ಲೇಖ:1) ಘನ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಡಬ್ಲೂಪಿ 24739/2012,
ದಿನಾಂಕ: 10.11.2017

2) ಕೇಂದ್ರ ಕಛೇರಿ ಆದೇಶ ಸಂಖ್ಯೆ: ಬಿ12(5)/ಪಿಆರ್/35/2020-21,
ದಿನಾಂಕ: 21.09.2020

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶಗಳಂತೆ ಪ್ರತಿ ಮಾಹೆಯ 1ನೇ ಮತ್ತು 3ನೇ ಶನಿವಾರ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಬೇಕಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಕ್ಷಿಣವಲಯದ ವಾರ್ಡ್ ಸಂಖ್ಯೆ:176 ಬಿ.ಟಿ.ಎಂ ಲೇಔಟ್, 9ನೇ ಮುಖ್ಯರಸ್ತೆಯ ಬಿ.ಟಿ.ಎಂ 2ನೇ ಹಂತದ ಕೆಂಪೇಗೌಡ ಆಟದ ಮೈದಾನದಲ್ಲಿರುವ ಬಿ.ಬಿ.ಎಂ.ಪಿ ಕಛೇರಿಯಲ್ಲಿ ಸಭೆಯನ್ನು ದಿನಾಂಕ: 17.07.2021ರ ಬೆಳಿಗ್ಗೆ 11:00 ಗಂಟೆಗೆ ನಿಗದಿಪಡಿಸಲಾಗಿದ್ದು, ವಾರ್ಡ್ ಸಮಿತಿ ಸದಸ್ಯರು ಹಾಗೂ ವಾರ್ಡ್ ಸಂಖ್ಯೆ 176 ಬಿ.ಟಿ.ಎಂ ಲೇಔಟ್‌ಗೆ ಸಂಬಂಧಿಸಿದ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಲು ಈ ಮೂಲಕ ಕೋರುತ್ತೇನೆ.

**:ಸಭಾ ಅಜೆಂಡಾ:**

| | |
|---|---|
| 1) | ಹಿಂದಿನ ಸಭೆಯ ನಡುವಳಿಗಳನ್ನು ಓದಿ ರೆಕಾರ್ಡ್ ಮಾಡುವುದು |
| 2) | ಕೋವಿಡ್-19 ರ ಬಗ್ಗೆ ಚರ್ಚಿಸುವುದು |
| 3) | ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ |
| 4) | ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ |
| 5) | ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳ ಬಗ್ಗೆ ಚರ್ಚೆ |

15/7/2021

ಕಾರ್ಯದರ್ಶಿಗಳು,
ವಾರ್ಡ್ ಸಂಖ್ಯೆ:176, ಬಿ.ಟಿ.ಎಂ ಲೇಔಟ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರವರಿಗೆ :-**

1) ಸಹಾಯಕ ಕಾರ್ಯಪಾಲಕ ಅಭಿಯಂತರರು(ಬಿಟಿಎಂ)ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
2) ಸಹಾಯಕ ಕಾರ್ಯಪಾಲಕ ಅಭಿಯಂತರರು(ಘ.ತ್ಯಾ.ನಿ.ಅ.ಬಿಟಿಎಂ)ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ ವಿಭಾಗ ಎಸ್-16 ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು ಉಪ ವಿಭಾಗ ಎಸ್-6 ಬೆಂಗಳೂರು ನೀರುಸರಬರಾಜು ಮಂಡಳಿ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
5) ತೋಟಗಾರಿಕೆ ಅಧೀಕ್ಷಕರು (ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
6) ಆರೋಗ್ಯ ವೈದ್ಯಾಧಿಕಾರಿಗಳು ಬಿ.ಟಿ.ಎಂ ಲೇಔಟ್ ವಿಭಾಗದವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
7) ಸಹಾಯಕ ಕಂದಾಯ ಅಧಿಕಾರಿಗಳು ಬಿ.ಟಿ.ಎಂ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಉಪವಿಭಾಗ ದಕ್ಷಿಣ ವಲಯ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
9) ಆರಕ್ಷಕ ಉಪನಿರೀಕ್ಷಕರು ಮೈಕೋ ಲೇಔಟ್ ಪೊಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
10) ಆರಕ್ಷಕ ಉಪನಿರೀಕ್ಷಕರು ಸಂಚಾರಿ ಪೊಲೀಸ್ ಠಾಣೆ ಮೈಕೋ ಲೇಔಟ್ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
11) ಮಾನ್ಯ ಮುಖ್ಯ ಅಭಿಯಂತರರು ಬೆಂಗಳೂರು ಮೆಟ್ರೋ ರೈಲು ನಿಗಮ ರವರ ಮಾಹಿತಿಗಾಗಿ ಹಾಗೂ ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ–ವಿಭಾಗದ ವಾರ್ಡ್ ಸಂಖ್ಯೆ–176 ಬಿ.ಟಿ.ಎಂ ಬಡಾವಣೆ ಕಛೇರಿಯಲ್ಲಿ ದಿನಾಂಕ: 17.07.2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು, ಬಿ.ಬಿ.ಬಿ.ಎಂ.,ರವರ ಕಛೇರಿ ಆದೇಶದ ಸಂಖ್ಯೆ:ಬಿ12(5)/ಪಿಆರ್/35/2020–21/21–09–2020ರ ಆದೇಶದಂತೆ ನೋಡೆಲ್ ಅಧಿಕಾರಿಯನ್ನಾಗಿ ಶ್ರೀ.ವೆಂಕಟೇಶ್.ಎಸ್, ಐ.ಆರ್.ಎಸ್, ಜಂಟಿ ಆಯುಕ್ತರು, ಹಣಕಾಸು, ಬಿ.ಬಿ.ಎಂಪಿ.ರವನ್ನು ನೇಮಿಸಲಾಗಿದ್ದು, ಸದರಿ ಆದೇಶದಂತೆ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ನಗರದ ಸ್ವಚ್ಚತೆ, ರಸ್ತೆ ನಿರ್ವಹಣೆ/ನಿರ್ಮಾಣ, ಬೀದಿ ದೀಪಗಳ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಮತ್ತು ಪಾಲಿಕೆಯ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ/ ಸದಸ್ಯರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು.

**ಸಭೆಗೆ ಹಾಜರಿದ್ದ ಅಧಿಕಾರಿ/ಸದಸ್ಯರುಗಳ ವಿವರ**

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ವೆಂಕಟೇಶ್.ಎಸ್, ಜಂಟಿ ಆಯುಕ್ತರು, ಹಣಕಾಸು ಬಿ.ಬಿ.ಎಂ.ಪಿ. | 9480685634 |
| 2 | ಶ್ರೀ.ನರೇಶ್‌ಕುಮಾರ್.ಕೆ ಸ.ಇಂ–176 ವಾರ್ಡ್ | 9844407499 |
| 3 | ಶ್ರೀ.ಮಲ್ಲಿಕಾರ್ಜುನ್ ಹಿರಿಯ ಆರೋಗ್ಯ ಪರಿವೀಕ್ಷಕರು | 9740660072 |
| 4 | ಶ್ರೀ. ಪ್ರಹ್ಲಾದ್,ಕಿರಿಯ ಆರೋಗ್ಯಾ ಪರಿವೀಕ್ಷಕರು | 9972320005 |
| 5 | ಶ್ರಿ. ಮುನಿರಾಜು ಸ್ಯಾನಟರಿ ದಫೇದಾರ | 9844884555 |
| 6 | ಶ್ರೀ ಲಿಂಗಮಯ್ಯ ಮೇಲ್ವೀಚಾರಕರು | 9844485981 |
| 7 | ಶ್ರೀ ನರಸಿಂಹ | 9035465589 |
| 8 | ಶ್ರೀ.ವರದರಾಜ ಸ್ಯಾನಿಟರಿ ದಫೇದಾರ | 9886492565 |
| 9 | ಶ್ರೀ.ಎಂ.ಕೃಷ್ಣಪ್ಪ ಪ್ರಧಾನ ಕಾರ್ಯದರ್ಶಿಗಳು ಕುವೆಂಪು ನಾಗರೀಕರ ವೇದಿಕೆ | 9740145923 |
| 10 | ಶ್ರೀ.ಗೋಪಾಲಕೃಷ್ಣ ಅಧ್ಯಕ್ಷರು ಕುವೆಂಪು ನಾಗರೀಕ ವೇದಿಕೆ | 9900111391 |
| 11 | ಶ್ರೀ. ವೈ .ಕೆ ಬೆನ್ನೂರ್ ಸದಸ್ಯರು ಬಿ.ಟಿ.ಎಂ ವೆಲ್‌ಫೇರ್ ಅಸೋಷಿಯೇಷನ್ | 9916079925 |
| 12 | ಸುಬ್ರಮಣ್ಯ ನಾಗಾರೀಕರು | |
| 13 | ಗಂಗಾಧರಪ್ಪ ನಾಗರೀಕರು | |

* * * * * *

ದಿನಾಂಕ–17–07–2021 ರಂದು ಬೆಳಿಗ್ಗೆ 11.00 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ದಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.



Scanned with CamScanner

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. ಘನತ್ಯಾಜ್ಯ ನಿರ್ವಹಣೆ ಬಗ್ಗೆ.

ಸಭೆಗೆ ಹಾಜರಿದ್ದ ಅಧ್ಯಕ್ಷರು ಮಾತನಾಡಿ, ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸವನ್ನು ಎಸೆಯದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ವಿಲೇವಾರಿ ಮಾಡುತ್ತಿರುವುದನ್ನು ತಡೆಯಲು ಸಮಗ್ರವಾಗಿ ವಿವರಿಸಿದರು.

ಸಭೆಗೆ ಹಾಜರಿದ್ದ, ಶ್ರೀ.ವೈ.ಕೆ ಬೆನ್ನೂರ್ ಮಾತನಾಡಿ 1ನೇ ಅಡ್ಡರಸ್ತೆ ಮೈಕೋ ಬಡಾವಣೆ ಪ್ರದೇಶದಲ್ಲಿ ಸುಮಾರು ಕಡೆ ಕಸವನ್ನು ಎಸೆಯುತ್ತಿದ್ದು, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಕೋರಿದರು. ಈ ಬಗ್ಗೆ ಆರೋಗ್ಯ ಇಲಾಖೆಯ ಸಿಬದಬಂದಿ ಮಾತನಾಡಿ ಕೂಡಲೇ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು

ಶ್ರೀ.ಎಂ.ಕೃಷ್ಣಪ್ಪ ಪ್ರಧಾನ ಕಾರ್ಯದರ್ಶಿಗಳು ಕುವೆಂಪು ನಾಗರೀಕರ ವೇದಿಕೆ ರವರು ಮಾತಾನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಅನೇಕ ಕಡೆಗಳಲ್ಲಿ ಪೌರಕಾರ್ಮಿಕರ ತಳ್ಳುವ ಗಾಡಿಗಳು ಹಾಳಾಗಿರುವುದು ಕಂಡುಬಂದಿದ್ದು ಕೂಡಲೇ ಹೊಸದಾಗಿ ತಳ್ಳುವ ಗಾಡಿಗಳನ್ನು ಒದಗಿಸಲು ಕೋರಿದರು

ಈ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತಾನಾಡಿ ತಳ್ಳುವ ಗಾಡಿಗಳನ್ನು ನೀಡುವುದು ಸ್ಥಗಿತಗೊಳಿಸಿದ್ದು, ಮುಂಬರುವ 1 ವಾರದಲ್ಲಿ ಎಲ್ಲಾ ಪೌರಕಾರ್ಮಿಕರಿಗೆ ಜಂಬೋ ಬ್ಯಾಗ್‌ಗಳನ್ನು ನೀಡುವುದಾಗಿ ತಿಳಿಸಿದರು.

ಶ್ರೀ.ಗೋಪಾಲಕೃಷ್ಣ ಅಧ್ಯಕ್ಷರು ಕುವೆಂಪು ನಾಗರೀಕ ವೇದಿಕೆ ರವರು ಮಾತಾನಾಡಿ, ಘನತ್ಯಾಜ್ಯ ನಿರ್ವಹಣೆಗೆ ಹೊಸ ತಾಂತ್ರಿಕ ಸೌಲಭ್ಯಗಳನ್ನು ಅಳವಡಿಸಿಕೊಂಡು ಪೌರಕಾರ್ಮಿಕರ ಹೊರೆಯನ್ನು ತಪ್ಪಿಸಬಹುದು ಎಂದು ಸಭೆಯಲ್ಲಿ ತಿಳಿಸಿದರು.

2. ಬೀದಿ ದೀಪಗಳ ನಿರ್ವಹಣೆ ಬಗ್ಗೆ.

ಶ್ರೀ.ಎಂ.ಕೃಷ್ಣಪ್ಪ ಪ್ರಧಾನ ಕಾರ್ಯದರ್ಶಿಗಳು ಕುವೆಂಪು ನಾಗರೀಕರ ವೇದಿಕೆ ರವರು ಮಾತಾನಾಡಿ ಬೀದಿ ದೀಪಗಳ ನಿರ್ವಹಣೆಗೆ ಟೈಮರ್‌ಗಳನ್ನು ಅಳವಡಿಸಲು ಕೋರಿದರು.

ಈ ಸಂಬಂಧ ಸೂಕ್ತಕ್ರಮ ಕೈಗೊಳ್ಳಲು ಸಂಬಂಧ ಪಟ್ಟ ಇಲಾಖೆಗೆ ತಿಳಿಸಲು ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.

3. ಬೀದಿ ನಾಯಿಗಳ ಬಗ್ಗೆ.

ಶ್ರೀ.ಎಂ.ಕೃಷ್ಣಪ್ಪ ಪ್ರಧಾನ ಕಾರ್ಯದರ್ಶಿಗಳು ಕುವೆಂಪು ನಾಗರೀಕರ ವೇದಿಕೆ ರವರು ಮಾತಾನಾಡಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಕೂಡಲೇ ಕ್ರಮವಹಿಸುವಂತೆ ಕೋರಿದರು

ಈ ಸಂಬಂಧ ಸೂಕ್ತಕ್ರಮ ಕೈಗೊಳ್ಳಲು ಸಂಬಂಧ ಪಟ್ಟ ಇಲಾಖೆಗೆ ತಿಳಿಸಲು ಹಿರಿಯ ಆರೋಗ್ಯ ಪರಿವೀಕ್ಷಕರವರಿಗೆ ಸೂಚಿಸಲಾಯಿತು.

**ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು**

17/4/2021

ಕಾರ್ಯದರ್ಶಿಗಳು,
ವಾರ್ಡ್ ಸಂಖ್ಯೆ:176, ಬಿ.ಟಿ.ಎಂ ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.



Scanned with CamScanner

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ



Scanned with CamScanner